ಎಲ್ಲ ಮೌಲ್ಯಗಳೂ ಈ ಆಧ್ಯಾತ್ಮಿಕ ಆಯಾಮದಿಂದಲೇ ಮೂಡಿ ಬರುವಂಥವು. ಪ್ರತಿಯೊಬ್ಬ ಮಾನವಜೀವಿ ಕೂಡ ಅದನ್ನು ಅಭಿವ್ಯಕ್ತಿಗೊಳಿಸುವ ಜೈವಿಕ ಸಾಮರ್ಥ್ಯವನ್ನು ಹೊಂದಿದ್ದಾನೆ. ಇದನ್ನೇ ನಾವು ಆಧ್ಯಾತ್ಮಿಕ ವಿಜ್ಞಾನ ಎನ್ನುವುದು.

## ನಮ್ಮ ದೈನಂದಿನ ಜೀವನದಲ್ಲಿ ಆಧ್ಯಾತ್ಮಿಕತೆ

ಒಬ್ಬ ವ್ಯಕ್ತಿ ನಿಮಗೆ ಒಂದು ಸಾವಿರ ರೂಪಾಯಿ ಲಂಚವನ್ನು ನೀಡಲು ಮುಂದಾಗುತ್ತಾನೆ ಎಂದಿಟ್ಟುಕೊಳ್ಳಿ. ನೀವು ವ್ಯಕ್ತಿತ್ವದ ಕೇವಲ ಆನುವಂಶಿಕ ವ್ಯವಸ್ಥೆಯಲ್ಲಿ ನಂಬಿಕೆಯಿಟ್ಟಿದ್ದೇ ಆದರೆ, ಆ ಲಂಚವನ್ನು ತೆಗೆದುಕೊಳ್ಳುತ್ತೀರಿ. ನಿಮ್ಮ ವ್ಯಕ್ತಿತ್ವದ ಬೌದ್ಧಿಕ ಆಯಾಮದಲ್ಲಿ ಮಾತ್ರವೇ ನೀವು ನಂಬಿಕೆಯಿಟ್ಟಿದ್ದಾದರೆ, ಆಗಲೂ ನೀವು ಲಂಚಕ್ಕೆ ಮಾರುಹೋಗುತ್ತೀರಿ. ಈ ಆಮಿಷಕ್ಕೆ ಅಂಕುಶ ಹಾಕುವ ಶಕ್ತಿ ವ್ಯಕ್ತಿತ್ವದ ಮೇಲಿನ ಎರಡು ಆಯಾಮಗಳಿಗೆ ಇಲ್ಲ. ಅದೇ ರೀತಿ, ಅನೈತಿಕ ಹಾಗೂ ಅನ್ಯಾಯದಿಂದ ಕೂಡಿದ ಬೇರೆ ಯಾವುದೇ ಆಮಿಷಗಳನ್ನು ಎದುರಿಸಿ ನಿಲ್ಲುವ ಸಾಮರ್ಥ್ಯವೂ ಅವುಗಳಿಗಿಲ್ಲ. ಆದರೆ ನೀವು ಸ್ವಲ್ಪವಾದರೂ ಆಧ್ಯಾತ್ಮಿಕ ಪ್ರಗತಿಯನ್ನು ಹೊಂದಿದ್ದೇ ಆದರೆ, "ನನಗಿದು ಬೇಕಾಗಿಲ್ಲ. ಇಲ್ಲಿ ನಾನಿರುವುದು ಜನರ ಸೇವೆಯನ್ನು ಮಾಡಲು" ಎಂದು ನಿರ್ದಾಕ್ಷಿಣ್ಯವಾಗಿ ಹೇಳುವ ಶಕ್ತಿಯನ್ನು ಸಂಪಾದಿಸಿಕೊಳ್ಳುತ್ತೀರಿ. ಅಂಥ ಆಧ್ಯಾತ್ಮಿಕ ಶಕ್ತಿಯು ಇಂದು ನಮ್ಮಲ್ಲಿ ಬಹುತೇಕರಲ್ಲಿ ಕಣ್ಮರೆಯಾಗಿಬಿಟ್ಟಿದೆ. ನಾವಿದನ್ನು ಮತ್ತೆ ಪುನರುಜ್ಜೀವನಗೊಳಿಸಿಕೊಳ್ಳಬೇಕಾಗಿದೆ. ಇದೇ ನಮ್ಮ ಜೀವನದ ಮೇಲೆ ಆಧ್ಯಾತ್ಮಿಕತೆಯು ಮಾಡುವ ಪ್ರಭಾವ. ಅಂತರಂಗದಲ್ಲಿ ಅಡಗಿರುವ ಈ ದಿವ್ಯತೆಯನ್ನು ಪ್ರಕಟಗೊಳಿಸಿಕೊಳ್ಳುವುದು ಪ್ರತಿಯೊಬ್ಬ ಮಾನವಜೀವಿಯ ಜನ್ಮಸಿದ್ಧ ಹಕ್ಕು. ಹಾಗೆಂದೇ ಸ್ವಾಮಿ ವಿವೇಕಾನಂದರು, 'ಧರ್ಮವು ಮಾನವನಲ್ಲಿ ಈಗಾಗಲೇ ಅಂತರ್ಗತವಾಗಿರುವ ದಿವ್ಯತೆಯ ಅಭಿವ್ಯಕ್ತಿ' ಎಂದು ಘೋಷಿಸುತ್ತಾರೆ. ಅವರ ಪ್ರಕಾರ ಧರ್ಮವೆಂದರೆ ಬರಿಯ ಆಚರಣೆಗಳಾಗಲಿ, ಪೂಜಾ ಪದ್ಧತಿಗಳಾಗಲಿ ಅಲ್ಲ; ಹಾಗೆಯೇ ಮಂತ್ರಜಾಲವಾಗಲಿ ಮೂಢನಂಬಿಕೆಯಾಗಲಿ ಅಲ್ಲ. ನಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ದಿವ್ಯತೆಯೆಂಬ ಅಗ್ನಿಯ ಕಿಡಿ ಅಂತರ್ಗತವಾಗಿಯೇ ಇದೆ. ಮಾನವ ವ್ಯಕ್ತಿತ್ವಕ್ಕೆ ತನ್ನದೇ ಆದ ಗಾಢ ಆಯಾಮವಿದೆ. ಈಗತಾನೇ ಹುಟ್ಟಿದ ಮಗುವಿನ ಕಣ್ಣುಗಳನ್ನು ನೋಡಿ. ಆ ಕಣ್ಣುಗಳಲ್ಲಿ ಮಾನವ ವ್ಯಕ್ತಿತ್ವದ ಅಗಾಧತೆಯನ್ನು ಕಾಣುತ್ತೀರಿ. ಆ ಅಗಾಧತೆಯ ಆಯಾಮವೆಂಬುದು ಎಂಥದು ಎನ್ನುವುದನ್ನು ನೀವು ಕಂಡುಕೊಳ್ಳಲು ಪಯತ್ನಿಸಬೇಕು. ಅದೇ ಒಂದು ಮಗುವಿನ ಬೊಂಬೆಯ ಕಣ್ಣುಗಳನ್ನು ನೋಡಿ. ಅದರಲ್ಲಿ ಅಂಥ ಗಾಢತೆ ಕಂಡುಬರುವುದೇ ಇಲ್ಲ. ಅಲ್ಲಿ ನಾವು ಕಾಣುವುದು ಮಾನವ ವ್ಯಕ್ತಿತ್ವದ ಮೇಲ್ಪದರದ ಆಯಾಮ ಮಾತ್ರ. ಒಂದು ಜೀವಂತ ಶಿಶುವಿನ ಕಣ್ಣುಗಳಲ್ಲಿ ಅಗಾಧ ಗಾಢತೆಯ ಆಯಾಮವನ್ನು ಕಾಣುತ್ತೇವೆ. ಪ್ರಾಚೀನ ಭಾರತದ ಋಷಿಮುನಿಗಳ ಮಹಾನ್ ಸಾಧನೆಯೆಂದರೆ, ಅವರು ಮಾನವ ಸ್ವಭಾವದ ಆ ಗಾಢ ಆಯಾಮದ ಒಳಹೊಕ್ಕು, ಎಲ್ಲರ ಹೃದಯಗಳಲ್ಲಿಯೂ ಅಂತರ್ಗತವಾಗಿರುವ ದಿವ್ಯತೆಯನ್ನು ಸಾಕ್ಷಾತ್ಕಾರಪಡಿಸಿಕೊಂಡರು. ಹಾಗೆಂದೇ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಹೀಗೆ ಹೇಳುತ್ತಾನೆ: "ಎಲ್ಲ ಜೀವಿಗಳ ಹೃದಯಲ್ಲಿ ನೆಲೆಸಿರುವ ಆತ್ಮತತ್ತ್ವವು ನಾನೇ ಆಗಿದ್ದೇನೆ." **(ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ ।)**

"ನಾನು ಎಲ್ಲ ಜೀವಿಗಳ ಹೃದಯದಲ್ಲಿಯೂ ಇದ್ದೇನೆ" ಎಂದು ಶ್ರೀಕೃಷ್ಣನು ಹೇಳುತ್ತಿದ್ದಾನೆ. ಹೀಗಾಗಿ ನೀವು ಮತ್ತು ನಾನು ಒಂದೇ ಆಗಿದ್ದೇವೆ. ನಾವು ಯಾರೂ ಪ್ರತ್ಯೇಕ ಜೀವಿಗಳಲ್ಲ. ಈ ದೇಹವು ನಮ್ಮ ನಡುವೆ ಭಿನ್ನತೆಯ ಭಾವನೆಯನ್ನು ಉಂಟುಮಾಡುತ್ತದೆ. ವಂಶವಾಹಿಗಳ ವ್ಯವಸ್ಥೆಯು ನಿಮ್ಮನ್ನು ಪ್ರತ್ಯೇಕರೆಂದು ಭಾವಿಸುವಂತೆ ಮಾಡುತ್ತದೆ. ಈ ಭಿನ್ನತೆಯ ಅಥವಾ ಪ್ರತ್ಯೇಕತೆಯ ಭಾವನೆಯೇ ಸ್ವಾರ್ಥ, ಸ್ವ-ಕೇಂದ್ರಿತ ವ್ಯಕ್ತಿತ್ವ ಮತ್ತು ಶೋಷಣೆಗಳಿಗೆ ಎಡೆಮಾಡಿಕೊಡುತ್ತದೆ. ಇದಕ್ಕೆ ಬದಲಾಗಿ ಆಧ್ಯಾತ್ಮಿಕ ಐಕ್ಯಭಾವನೆಯು ಪ್ರೀತಿ, ಅನುಕಂಪ, ಸೇವೆ ಮುಂತಾದ ಮೌಲ್ಯಗಳ ಮೂಲಸ್ರೋತವಾಗಿದೆ. ಹಾಗೆಯೇ ಚಾರಿತ್ರ್ಯವೂ ಇದರಿಂದಲೇ ಹೊರಹೊಮ್ಮುತ್ತದೆ. ಈ ನಮ್ಮ ಆಧ್ಯಾತ್ಮಿಕ ಐಕ್ಯತೆಯನ್ನು ಸಾಕ್ಷಾತ್ಕರಿಸಿಕೊಳ್ಳುವುದೇ ಉನ್ನತ ಚಾರಿತ್ರ್ಯವನ್ನು ಬೆಳೆಸಿಕೊಳ್ಳುವುದಕ್ಕೆ ಏಕಮೇವ ರಾಜಮಾರ್ಗವಾಗಿದೆ. *(ಮುಂದುವರಿಯುವುದು)* *

## ಗುರು – ಭಗವಂತ

**ಗುರುವು ಭಗವಂತನೇ ಆಗಿದ್ದಾನೆ. ಮಾನವನು ಮುಕ್ತಿಯನ್ನು ಹೊಂದಲು ಅತ್ಯಂತ ಅಗತ್ಯವಾದ ಮೂರ್ತರೂಪವನ್ನು ತಳೆದು, ಎಲ್ಲರಿಗೂ ಗೋಚರವಾಗುವಂತೆ ಅವನು ಆವಿರ್ಭವಿಸುತ್ತಾನೆ. ಏಕೆಂದರೆ, ಭಗವಂತನೊಬ್ಬನೇ ಮಾನವನನ್ನು ಭಗವಂತನೆಡೆಗೆ ಕರೆದೊಯ್ಯಬಲ್ಲ.**

**ಗುರುವು ಸೃಷ್ಟಿ, ಸ್ಥಿತಿ, ವಿನಾಶಗಳನ್ನು ಮಾಡುವವನಷ್ಟೇ ಅಲ್ಲ; ಅವನು ದೇಶ, ಕಾಲ, ಕಾರ್ಯಕಾರಣಗಳನ್ನು ಮೀರಿದ ಪರಬ್ರಹ್ಮನೇ ಆಗಿದ್ದಾನೆ ಎಂದು ಶಾಸ್ತ್ರಗಳು ಹೇಳುತ್ತವೆ. ಗುರುವಿಗೆ ವಿಧೇಯನಾಗಿದ್ದುಕೊಂಡು ಅವನನ್ನು ಆರಾಧಿಸುವುದೆಂದರೆ, ನಾವು ಭಗವಂತನಿಗೆ ವಿಧೇಯನಾಗಿದ್ದಂತೆ; ಅವನನ್ನೇ ಪೂಜಿಸಿದಂತೆ.**

**ಗುರು ಭಗವಂತನಿಗಿಂತ ಬೇರೆಯಾಗಿರುವ, ಮಧ್ಯವರ್ತಿಯಾಗಿರುವ ವ್ಯಕ್ತಿಯಲ್ಲ; ಅವನು ಸಾಕ್ಷಾತ್ ಭಗವಂತನೇ ಆಗಿದ್ದಾನೆ. ಮಾನವನ ಸಾಕ್ಷಾತ್ಕಾರಕ್ಕಾಗಿ ಮಾನವದೇಹವನ್ನು ತಳೆದ ಕರುಣಾಮಯ ಮೂರ್ತಿಯಾದ ಭಗವಂತನೇ ಅವನು.**

**–ಸ್ವಾಮಿ ರಾಮಕೃಷ್ಣಾನಂದ**

## ಹಿಂದೂ ಸಂನ್ಯಾಸ ಸಂಪ್ರದಾಯ ಮತ್ತು ಧರ್ಮಾಚರಣೆಗಳಿಗೆ

# ಸ್ವಾಮಿ ರಾಮಕೃಷ್ಣಾನಂದರ ಅನುಪಮ ಕೊಡುಗೆ

**ಸ್ವಾಮಿ ಹರ್ಷಾನಂದ**

ಶ್ರೀರಾಮಕೃಷ್ಣರ ಧ್ಯೇಯ–ಆದರ್ಶಗಳನ್ನು ತಮ್ಮ ಜ್ವಲಂತ ಜೀವನದ ಮೂಲಕ ಜನತೆಯ ಮುಂದಿಟ್ಟ, ಅವರ ನೇರ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ರಾಮಕೃಷ್ಣಾನಂದರು ದಕ್ಷಿಣ ಭಾರತದಲ್ಲಿ ರಾಮಕೃಷ್ಣ–ವಿವೇಕಾನಂದ ಭಾವಧಾರೆಯನ್ನು ಹರಡಿದವರಲ್ಲಿ ಪ್ರಮುಖರು. ಜುಲೈ ತಿಂಗಳ ೨೪ರಂದು ಅವರ ಜಯಂತಿಯನ್ನು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಅವರ ಜೀವನ ಮತ್ತು ಸಾಧನೆಗಳನ್ನು ಕುರಿತು ಸಮಗ್ರ ದೃಷ್ಟಿಯ ನಿರೂಪಣೆಯನ್ನು ಮಾಡಿರುವ ಲೇಖಕರು ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರು. ಸಂಸ್ಕೃತ, ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಅಪಾರ ವಿದ್ವತ್ತನ್ನು ಹೊಂದಿರುವ ಸ್ವಾಮೀಜಿಯವರು ಹಲವು ಗ್ರಂಥಗಳನ್ನು ರಚಿಸಿದ್ದು, ಅವು ಅತ್ಯಂತ ಪ್ರಸಿದ್ಧವಾಗಿವೆ.

ಸ್ವಾಮಿ ವಿವೇಕಾನಂದರು ತಾವು ಸಂನ್ಯಾಸ ಸ್ವೀಕರಿಸುವ ಸಮಯದಲ್ಲಿ "ರಾಮಕೃಷ್ಣಾನಂದ" ಎಂಬ ಹೆಸರನ್ನು ತಾವೇ ಇಟ್ಟುಕೊಳ್ಳುವ ಬಯಕೆಯನ್ನು ಹೊಂದಿದ್ದರೂ, ಅದು ಶಶಿಭೂಷಣರಿಗೇ ಹೆಚ್ಚು ಸೂಕ್ತವಾಗಿ ಹೊಂದಿಕೊಳ್ಳುವುದೆಂಬುದನ್ನು ಅರಿತು, ಆ ಹೆಸರನ್ನು ಶಶಿಭೂಷಣರಿಗೆ ಕೊಟ್ಟುಬಿಟ್ಟರು ಎಂಬ ಹೇಳಿಕೆ ಇದೆ. ಶ್ರೀರಾಮಕೃಷ್ಣರ ಅಂತ್ಯ ಕಾಲದಲ್ಲಿ, ಅವರಿಗೆ ಬಹು ಶ್ರದ್ಧೆಯಿಂದ ಸೇವೆ ಸಲ್ಲಿಸಿದ ಶಶಿಭೂಷಣರು ಆ ಹೆಸರಿಗೆ ತಕ್ಕ ಅರ್ಹತೆಯನ್ನು ಪಡೆದಿದ್ದರು. ಶ್ರೀರಾಮಕೃಷ್ಣರು ಜೀವಂತವಾಗಿದ್ದಾಗ ಮಾಡಿದ ಸೇವೆ, ಮತ್ತು ಅವರು ಮಹಾಸಮಾಧಿಯನ್ನು ಹೊಂದಿದ ಮೇಲೆ ಅವರ ಅವಶೇಷಗಳಿಗೆ ಶಶಿಯು ಸಲ್ಲಿಸಿದ ಪೂಜೆಗಳು, ಕನಿಷ್ಠವಾಗಿ ಹೇಳಬೇಕೆಂದರೂ, ಬಲು ಆದರ್ಶಪ್ರಾಯವಾಗಿದ್ದವು.

ಈ ಲೇಖನವನ್ನು ಶಶಿಭೂಷಣರ ಜೀವನದ ಸಂಕ್ಷಿಪ್ತ ವಿವರಗಳೊಂದಿಗೆ ಆರಂಭಿಸೋಣ. ಏಕೆಂದರೆ ಅವರ ಸಾಧನೆಗಳನ್ನು ಕುರಿತು ಅಧ್ಯಯನ ನಡೆಸಲು ಯೋಗ್ಯ ಹಿನ್ನೆಲೆಯನ್ನು ಅವು ಒದಗಿಸುತ್ತವೆ.

ಸ್ವಾಮಿ ವಿವೇಕಾನಂದರು ಜನ್ಮ ತಾಳಿದ ವರ್ಷವೇ ಶಶಿಭೂಷಣರು ೧೮೬೩ರ ಜುಲೈ ೧೩ರಂದು ಬಂಗಾಳದ ಹೂಗ್ಲಿ ಜಿಲ್ಲೆಯ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಅವರಿಗೆ ಜೀವನದ ಪ್ರಾರಂಭ ಹಂತದಲ್ಲಿ ಒಳ್ಳೆಯ ಶಿಕ್ಷಣ ಮತ್ತು ಉತ್ತಮ ತರಬೇತಿ ದೊರೆತು, ಅವು ಅವರ ಉತ್ತಮಮಟ್ಟದ ಶೀಲಕ್ಕೆ ಅಸ್ತಿಭಾರವನ್ನು ಹಾಕಿದವು. ತನ್ನ ಸಮೀಪ ಬಂಧುವಾದ ಶರತ್ (ಸ್ವಾಮಿ ಶಾರದಾನಂದ)ನೊಂದಿಗೆ ಶಶಿಭೂಷಣರು ಶ್ರೀರಾಮಕೃಷ್ಣರನ್ನು ಮೊದಲ ಸಲ ಭೇಟಿಯಾದ ಮೇಲೆ, ಅವರೊಂದಿಗೆ ಅತಿ ನಿಕಟವಾದ ಸಂಬಂಧವನ್ನು ಹೊಂದಿ, ಶ್ರೀರಾಮಕೃಷ್ಣರನ್ನು ತಮ್ಮ ಜೀವನದ, ಮಾರ್ಗದರ್ಶನದ ಧ್ರುವತಾರೆಯಾಗಿ ಸ್ವೀಕರಿಸಿದರು.

ಶಶಿಭೂಷಣರು ತಮ್ಮ ಗುರುಗಳಾದ ಶ್ರೀರಾಮಕೃಷ್ಣರ ಅನಾರೋಗ್ಯದ ದಿನಗಳಲ್ಲಿ, ಹಗಲುರಾತ್ರಿಗಳನ್ನು ಲೆಕ್ಕಿಸದೆ ಅವರ ಸೇವೆಗೈದರು. ಶ್ರೀರಾಮಕೃಷ್ಣರ ಮಹಾಸಮಾಧಿಯಾದ ಮೇಲೆ, ಅವರ ಅಸ್ಥಿಭಸ್ಮಗಳನ್ನು ಸಂಗ್ರಹಿಸಿ, ಅದನ್ನು ರಾಮಕೃಷ್ಣ ಮಹಾಸಂಘದ ಪ್ರಪ್ರಥಮ ಮಠವಾದ ಬಾರಾನಗರದಲ್ಲಿ ಸ್ಥಾಪಿಸಿದ ಮೇಲೆ, ಶಶಿಭೂಷಣರು ಆ ಅಸ್ಥಿಕಲಶದ ಅರ್ಚನೆಯ ಭಾರವನ್ನು ವಹಿಸಿಕೊಂಡರು. ತೀವ್ರ ವೈರಾಗ್ಯದ ಕಿಚ್ಚನ್ನು ಹೊಂದಿದ್ದ ತಮ್ಮ ಸಂನ್ಯಾಸಿ ಸೋದರರ ಯೋಗಕ್ಷೇಮವನ್ನು ನೋಡಿಕೊಳ್ಳುವ ಹೊಣೆಯನ್ನೂ ಅವರು ಹೊತ್ತುಕೊಂಡರು. ಶಶಿಭೂಷಣರ ಸೋದರ ಸಂನ್ಯಾಸಿಗಳ ಪ್ರೀತಿವಾತ್ಸಲ್ಯಪೂರಿತ ಪಾಲನೆಗಿಂತ ಅಧಿಕವಾಗಿ ಯಾವ ಒಬ್ಬ ತಾಯಿಯೂ ತನ್ನ ಮಕ್ಕಳ ಲಾಲನೆಪಾಲನೆಯನ್ನು ಮಾಡಲಾಗುತ್ತಿರಲಿಲ್ಲ ಎನ್ನಬಹುದು.

ಶಶಿಭೂಷಣರು– ಈಗ ಸ್ವಾಮಿ ರಾಮಕೃಷ್ಣಾನಂದರು– ಸ್ವಾಮಿ ವಿವೇಕಾನಂದರ ಆದೇಶದ ಮೇಲೆ ಒಂದು ಆಶ್ರಮವನ್ನು ಸ್ಥಾಪಿಸಲು ಮದರಾಸಿಗೆ(ಈಗಿನ ಚೆನ್ನೈ) ಬಂದರು. ತಮ್ಮ ಸರಳ ಜೀವನ, ಶ್ರದ್ಧಾಪೂರ್ವಕ ಸೇವೆ, ಮತ್ತು ಅಪಾರ ವಿದ್ವತ್ತಿನೊಂದಿಗೆ ಅವರು ಆಶ್ರಮವನ್ನು ಒಂದು ಗಟ್ಟಿಯಾದ ತಳಹದಿಯ ಮೇಲೆ ನಿಲ್ಲಿಸಿದರು. ಇದಕ್ಕಾಗಿ ಅವರು ಅನೇಕ ಅಗ್ನಿಪರೀಕ್ಷೆಗಳನ್ನು ಎದುರಿಸಬೇಕಾಯಿತು. ತದನಂತರ ಅವರು, ರಾಜರ ಆಳ್ವಿಕೆಯಲ್ಲಿದ್ದ ಮೈಸೂರು ಸಂಸ್ಥಾನದ ಜನರಲ್ಲಿ ಶ್ರೀರಾಮಕೃಷ್ಣರ



ಬೋಧನೆಗಳ ಮೇಲೆ ಆಸಕ್ತಿ ಮೂಡಿಸಿ, ಅಂತಿಮವಾಗಿ ಬೆಂಗಳೂರಿನಲ್ಲಿ ಸಹ ಒಂದು ಮಠವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದರು.

ಮದರಾಸಿನ ಮಠವನ್ನು ಸದೃಢವಾಗಿ ನಿಲ್ಲಿಸಲು ಅವರು ಪಟ್ಟ ಕಠಿಣಶ್ರಮ, ಅವರ ದೇಹವನ್ನು ಶಿಥಿಲಗೊಳಿಸಿತು. ರಾಮಕೃಷ್ಣಾನಂದರು ೧೯೧೧ರ ಸೆಪ್ಟೆಂಬರ್ ೨೧ರಂದು ತಮ್ಮ ಶರೀರವನ್ನು ಕಲ್ಕತ್ತೆಯಲ್ಲಿ ತ್ಯಜಿಸಿದರು.

ಅವರು ಉನ್ನತಮಟ್ಟದ, ಅಪಾರವಾದ ವಿದ್ವತ್ತನ್ನು ಹೊಂದಿದ್ದರು; ಹಾಗೂ ಭಗವಂತನಲ್ಲಿ ಅತ್ಯಂತ ಆಳವಾದ ಭಕ್ತಿಯನ್ನು ಹೊಂದಿದ್ದರು. ಹೊರಗೆ ಅತ್ಯಂತ ಕಠಿಣ ಶಿಸ್ತನ್ನು ಅಳವಡಿಸಿಕೊಂಡಿದ್ದ ಅವರು, ಒಳಗೆ ಸುಕೋಮಲವಾದ ಮಾತೃ ಹೃದಯವನ್ನು ಹೊಂದಿದ್ದರು.

ಅದು ಏನೇ ಇದ್ದರೂ ಹಿಂದೂ-ಸಂನ್ಯಾಸಾಶ್ರಮದ ಹಿಂದಿರುವ ನೈಜ ಅರ್ಥ ಹಾಗೂ ಶಾಸ್ತ್ರಾಚರಣೆಗಳಿಗೆ, ರಾಮಕೃಷ್ಣಾನಂದರ ಅಪಾರ ಕೊಡುಗೆ ಏನೆಂಬುದನ್ನು ತೆರೆದು ತೋರಿಸಲು ಅವರ ಜೀವನವನ್ನು ಆಳವಾಗಿ ಅಭ್ಯಾಸ ಮಾಡುವುದು ಅವಶ್ಯವಾಗಿದೆ.

ಒಂದು ಸಂನ್ಯಾಸ ಮಠದ ಮಹತ್ವವು, ಆ ಮಠದಲ್ಲಿರುವ ಅಧಿಕ ಸಂನ್ಯಾಸಿಗಳ ಸಂಖ್ಯೆಯ ಮೇಲೆ, ಬೃಹತ್ ಕಟ್ಟಡಗಳ ಮೇಲೆ, ಬಹುವಿಧವಾದ ಕಾರ್ಯ ಚಟುವಟಿಕೆಗಳ ಮೇಲೆ, ದಿಗ್ಭ್ರಮೆಗೊಳಿಸುವ ಆಡಳಿತಯಂತ್ರದ ಮೇಲೆ ಅಥವಾ ಬ್ಯಾಂಕುಗಳಲ್ಲಿ ಶೇಖರಿಸಿರುವ ಅಪಾರ ಹಣದ ಮೇಲೆ ಅವಲಂಬಿತವಾಗಿಲ್ಲ! ಬದಲಾಗಿ ಹೇಗೆ ನೂಲಿನ ಗುಣಮಟ್ಟವು ಬಟ್ಟೆಯ ಗುಣಮಟ್ಟವನ್ನು ನಿರ್ಧರಿಸುವುದೋ ಹಾಗೆ ಅದು ಮಠದಲ್ಲಿರುವ ಪ್ರತಿಯೊಬ್ಬ ನಿವಾಸಿಯ ಶೀಲ ಮತ್ತು ನಡವಳಿಕೆಗಳ ಮೇಲೆ ನಿಂತಿರುತ್ತದೆ.

ಹಿಂದೂ ಸಂನ್ಯಾಸ ಸಂಪ್ರದಾಯವು, ಜ್ಞಾನ ಮತ್ತು ತಪಸ್ಸುಗಳಿಗೆ ಹೆಚ್ಚಿನ ಮಹತ್ವವನ್ನು ನೀಡಿ, ಸಂನ್ಯಾಸಿಗಳಾಗಲು ಬಯಸಿದವರು ಮೂಲಭೂತವಾಗಿ ಜ್ಞಾನಾರ್ಜನೆಗೆ ಮತ್ತು ತಪಶ್ಚರ್ಯೆಗಳಿಗೆ ಸಿದ್ಧವಿರಬೇಕೆಂದು ಆಗ್ರಹಿಸುತ್ತದೆ.

ಕೇವಲ ಬೌದ್ಧಿಕ ಬೆಳವಣಿಗೆ ಭಾವನೆಗಳ ಮುಖ್ಯಕೇಂದ್ರವಾದ ಹೃದಯವು ಶುಷ್ಕವಾಗಲು ಎಡೆಮಾಡಿಕೊಡುತ್ತದೆ. ಅದಕ್ಕೆ ಬದಲಾಗಿ ಅತಿಯಾದ ದೈಹಿಕ ತಪಶ್ಚರ್ಯೆಗಳು ಆಧ್ಯಾತ್ಮಿಕ ಬೆಳವಣಿಗೆಗೆ ಸಾಧನವಾದ ದೇಹ-ಮನಸ್ಸುಗಳ ಸಂಘಾತ ಕುಸಿದುಹೋಗಲು ಕಾರಣವಾಗಬಹುದು. ಆದ್ದರಿಂದ ಈ ಎರಡರ ಸಂಯುಕ್ತ ಸಮತೋಲನೆ ಮತ್ತು ಬೆಳವಣಿಗೆ ಅಪೇಕ್ಷಣೀಯ.

ಯಥಾರ್ಥವಾಗಿ ನೋಡಿದರೆ, ಹಿಂದೂ ಸಂನ್ಯಾಸ ಸಂಪ್ರದಾಯದಲ್ಲಿ ಜ್ಞಾನವೆಂದರೆ ಶಾಸ್ತ್ರಗಳಾದ ಉಪನಿಷತ್‌ಗಳು ಮತ್ತು ಭಗವದ್ಗೀತೆಯು ತಿಳಿಸಿಕೊಡುವ ಅರಿವಿನ ಗ್ರಹಿಕೆ. ತಪಸ್ಸೆಂದರೆ ದೇಹವನ್ನು ಆಧ್ಯಾತ್ಮಿಕ ಜೀವನದ ಒತ್ತಡ ಮತ್ತು ಶ್ರಮಗಳಿಗೆ ಒಗ್ಗುವಂತೆ ಸಿದ್ಧಗೊಳಿಸುವುದು ಮತ್ತು ಇಂದ್ರಿಯಗಳನ್ನು ನಿಗ್ರಹಿಸಿ ಅವುಗಳ ಶಕ್ತಿಯನ್ನು ಜೀವನದ ಗುರಿಯತ್ತ ಕೇಂದ್ರೀಕರಿಸುವುದು.

ಜ್ಞಾನಕ್ಕೆ ಎರಡು ಆಯಾಮಗಳಿವೆ: ಒಂದು ಬೌದ್ಧಿಕ, ಮತ್ತೊಂದು ಆಧ್ಯಾತ್ಮಿಕ. ಬೌದ್ಧಿಕ ಪಾಂಡಿತ್ಯವನ್ನು ಉಪನಿಷತ್ತೇ ಮೊದಲಾದ ಶಾಸ್ತ್ರದ ಆಳವಾದ ಅಧ್ಯಯನದಿಂದ ಪಡೆಯಬಹುದು. ಆದರೆ ಇದಕ್ಕೆ ವ್ಯಾಕರಣ ಜ್ಞಾನದ, ಶಬ್ದನಿಷ್ಪತ್ತಿಯ ಮತ್ತು ಬಳಕೆಯ ಜ್ಞಾನದ ಹಿನ್ನೆಲೆ ಇರಬೇಕಾಗುತ್ತದೆ. ಜೊತೆಗೆ ಪ್ರಾಚೀನ ವಿದ್ವಾಂಸರುಗಳಿಂದ ಶಾಸ್ತ್ರಗಳ ಮೇಲೆ ರಚಿತವಾದ ಪ್ರಮಾಣಯುಕ್ತ ಭಾಷ್ಯಗಳ ಅಧ್ಯಯನವೂ ಆವಶ್ಯಕ. ಆದರೆ ಇದು ಹೊರಕವಚ ಮಾತ್ರ.

ಬೋಧನೆಯ ಅಂತರಾರ್ಥವನ್ನು, ಶ್ರದ್ಧಾಪೂರಿತ ಸಾಧನೆಯಿಂದ ಹೊಮ್ಮುವ ಅಂತರ್ದೃಷ್ಟಿಯಲ್ಲಿ ಗ್ರಹಿಸಿ ಅನುಭವಕ್ಕೆ ತಂದುಕೊಳ್ಳಬಹುದು. ಹೀಗೆ ಆದರೆ ಮಾತ್ರ ಜ್ಞಾನದ ಗಳಿಕೆ ಪೂರ್ಣವಾಗುವುದು.

ತಪಸ್ಸಿಗೆ ಭಗವದ್ಗೀತೆಯು (ಅ.೧೭.೧೪-೧೬) ಮಾನವನ ವ್ಯಕ್ತಿತ್ವದ ಮೂರು ಭಾಗಗಳನ್ನೊಳಗೊಂಡಿರುವಂತೆ- ಅಂದರೆ ಶಾರೀರಕ, ವಾಕ್ ಮತ್ತು ಮನಸ್ಸಿನ ರೂಪಗಳು- ಸುಂದರ ವಿವರಣೆಯನ್ನು ನೀಡುತ್ತದೆ.

ಆಧ್ಯಾತ್ಮಿಕ ಪಿಪಾಸುವಿಗೆ, ಭೋಗ ಅಥವಾ ಕಠಿಣ ದೈಹಿಕ ಸಾಧನೆಗಳು ಗುರಿಯಾಗಿರದೆ, ಕೇವಲ ಭಗವತ್ ಸಾಕ್ಷಾತ್ಕಾರವೇ ಗುರಿಯಾಗಿರುವುದರಿಂದ ಅವನು ಅತಿರೇಕಕ್ಕೆ ಇಳಿಯದೆ ಮಧ್ಯ ಮಾರ್ಗವನ್ನು ಅನುಸರಿಸುವುದು ಒಳಿತು. ಆದ್ದರಿಂದ ದೇಹ-ಮನಸ್ಸುಗಳ ಸಂಘಾತವನ್ನು ಸುಸ್ಥಿತಿಯಲ್ಲಿ ಇಟ್ಟಿರಬೇಕು. ಆದರೆ ಮನಸ್ಸನ್ನು ಶುದ್ಧಸ್ಥಿತಿಯಲ್ಲಿ, ಉನ್ನತ ಆಧ್ಯಾತ್ಮಿಕ ನೆಲೆಯಲ್ಲಿ ಇಡಲು ಗರಿಷ್ಠಮಿತಿಯ ಪ್ರಯತ್ನ ಮಾಡುತ್ತಿರಬೇಕು.

ಈಗ ನಾವು ರಾಮಕೃಷ್ಣಾನಂದರ ಜೀವನಕ್ಕೆ ಹಿಂತಿರುಗಿ, ಮೇಲ್ಕಂಡ ಆದರ್ಶಸೂತ್ರಗಳು ಹೇಗೆ ಫಲಕಾರಿಯಾದವು ಎಂಬುದನ್ನು ನೋಡೋಣ.

೧೮೮೬ ನೇ ಇಸವಿ, ಜನವರಿ ಮಧ್ಯಭಾಗದಲ್ಲಿ ಶ್ರೀರಾಮಕೃಷ್ಣರು ತಮ್ಮ ಹನ್ನೆರಡು ಮಂದಿ ಶಿಷ್ಯರಿಗೆ ಕಾವಿ ವಸ್ತ್ರಗಳನ್ನು ಕೊಟ್ಟಾಗ ಅದನ್ನು ಸ್ವೀಕರಿಸಿದವರಲ್ಲಿ ಶಶಿಯೂ ಒಬ್ಬನು. ಹಾಗೆಯೇ ಈ ಶಿಷ್ಯರುಗಳು ಆಂಟ್‌ಪುರದಲ್ಲಿ (ಬಾಬುರಾಮನ, ಅಂದರೆ ಮುಂದೆ ಸ್ವಾಮಿ ಪ್ರೇಮಾನಂದರ ತಂದೆ ತಾಯಂದಿರ ಸ್ಥಳ) ಒಟ್ಟಿಗೆ ಸೇರಿ ನರೇಂದ್ರನ (ಸ್ವಾಮಿ ವಿವೇಕಾನಂದ) ನೇತೃತ್ವದಲ್ಲಿ ಧುನಿಯನ್ನು ಹತ್ತಿಸಿ, ಎಲ್ಲರೂ ಮಾನಸಿಕವಾಗಿ ಸಂನ್ಯಾಸಿಗಳಾಗಲು ಪ್ರತಿಜ್ಞೆ ಮಾಡಿದಾಗ, ಶಶಿಯೂ ಅಲ್ಲಿದ್ದನು. ಅಂತಿಮವಾಗಿ, ವಿಧಿಪೂರ್ವಕವಾಗಿ ವಿರಜಾಹೋಮವನ್ನು ಮಾಡಿ, ಸಂನ್ಯಾಸಾಶ್ರಮದ ಪ್ರತಿಜ್ಞೆಗಳನ್ನು ತೆಗೆದುಕೊಂಡಾಗ, ಶಶಿಯೂ ಅದರಲ್ಲಿ ಭಾಗವಹಿಸಿ ಸ್ವತಃ ವಿವೇಕಾನಂದರೇ ಕೊಟ್ಟ "ರಾಮಕೃಷ್ಣಾನಂದ" ಎಂಬ ಸಂನ್ಯಾಸಾಶ್ರಮದ ನೂತನ ಹೆಸರನ್ನು ಸ್ವೀಕರಿಸಿದನು.

ಬಾರಾನಗರದ ಮಠದ ಪ್ರಾರಂಭದ ದಿನಗಳಲ್ಲಿ, ರಾಮಕೃಷ್ಣಾನಂದರು ತಪಸ್ಸಿನ ಎರಡು ಮೂಲ ಅಂಶಗಳನ್ನು- ಕಠೋರ ಸಂಯಮ ಮತ್ತು ಬ್ರಹ್ಮಚರ್ಯಗಳನ್ನು ಪಾಲಿಸಿಕೊಂಡು ಬಂದರು. ಶ್ರೀರಾಮಕೃಷ್ಣರ ಅವಶೇಷವನ್ನು ಇಟ್ಟಿದ್ದ ಕರಂಡಕವನ್ನು ಪೂಜಿಸುವುದರ ಜೊತೆಗೆ, ಮಠದ ಇತರ ಎಲ್ಲ ಕೆಲಸಗಳನ್ನು ಏಕಾಂಗಿಯಾಗಿ ಮಾಡಿ, ಉಳಿದ ಸಂನ್ಯಾಸೀ ಸೋದರರು ಯಾವಾಗಲೂ ಧ್ಯಾನ ಅಥವಾ ಶಾಸ್ತ್ರಾಧ್ಯಯನದಲ್ಲಿ ತೊಡಗಿರುವಾಗ ಅವರ ಯೋಗಕ್ಷೇಮವನ್ನೂ ನೋಡಿಕೊಳ್ಳುತ್ತಿದ್ದರು. ಅವರ ಸಂನ್ಯಾಸೀ ಸೋದರರು ಪರಿವ್ರಾಜಕರಾಗಿ, ಕೆಲವೊಮ್ಮೆ ದೀರ್ಘ

ಕಾಲ, ಕೆಲವೊಮ್ಮೆ ಅಲ್ಪಕಾಲ ಸಂಚಾರ ಮಾಡುತ್ತಿದ್ದರೂ, ಸ್ವಾಮಿ ರಾಮಕೃಷ್ಣಾನಂದರು ಮಠದಲ್ಲಿಯೇ ಇದ್ದು, ತಪಶ್ಚರ್ಯೆ ಮತ್ತು ಭಗವತ್ಸೇವೆಯ ಪಥದಲ್ಲಿಯೇ ನಿರತರಾಗಿ ಆಚೀಚೆ ಸರಿಯುತ್ತಿರಲಿಲ್ಲ. ಇದು ಹದಿನೈದು ವರ್ಷದಷ್ಟು ದೀರ್ಘಕಾಲದ ವರೆಗೆ ಮುಂದುವರಿಯಿತು.

ಸಂನ್ಯಾಸಿಯು ಯಾವುದೇ ವ್ಯಕ್ತಿಗಾಗಲಿ, ಸ್ಥಳಕ್ಕಾಗಲಿ ಅಥವಾ ವಸ್ತುವಿಗಾಗಲಿ ಮನೋಬಂಧನಕ್ಕೆ ಒಳಗಾಗದೆ, ಸದಾ ಭಗವಂತನ ಸಾನ್ನಿಧ್ಯವನ್ನು ಬಯಸುತ್ತಿರಬೇಕೆಂಬುದು ನಿಯಮ. ಅದರಂತೆ ಸ್ವಾಮಿ ವಿವೇಕಾನಂದರು ೧೮೯೭ರ ಮಾರ್ಚ್‌ನಲ್ಲಿ ಮದರಾಸಿಗೆ(ಈಗಿನ ಚೆನ್ನೈ) ಹೋಗಿ ಅಲ್ಲಿ ಮಠದ ಕೇಂದ್ರವೊಂದನ್ನು ಪ್ರಾರಂಭಿಸಲು ಸೂಚಿಸಿದಾಗ, ರಾಮಕೃಷ್ಣಾನಂದರು ಒಮ್ಮೆಗೇ ಒಪ್ಪಿಗೆ ಸೂಚಿಸಿ, ಬಾರಾನಗರ ಮಠದ ಸಂಬಂಧವನ್ನು ಸಂಪೂರ್ಣವಾಗಿ ತ್ಯಜಿಸಿ, ಮದರಾಸಿಗೆ ಹೊರಟೇಬಿಟ್ಟರು!

೧೮೯೭ರ ಏಪ್ರಿಲ್‌ನಿಂದ ಸೆಪ್ಟೆಂಬರ್ ೧೯೧೧ರ ವರೆಗಿನ ಅವಧಿಯ ೧೪ ವರ್ಷಗಳ ದೀರ್ಘಕಾಲವು ಅವರನ್ನು ಅಲ್ಲಿಗೆ ಕಳುಹಿಸಿದ ಕಾರ್ಯಕ್ಕಾಗಿ ಅವರು ಮಾಡಿದ ಸಮರ್ಪಣೆ ಮತ್ತು ತ್ಯಾಗದ ಕಥೆಯಾಗಿತ್ತು.

ಅವರು ಮೊದಲು ಐಸ್‌ಹೌಸ್‌ನಲ್ಲಿ (ಆಗ ಕ್ಯಾಸಲ್ ಕರ್ನನ್) ೧೦ ವರ್ಷಗಳ ಕಾಲ, ೧೯೦೬ರ ವರೆಗೆ ಇದ್ದು, ನಂತರ ಕೊಂಚಕಾಲ ಸಣ್ಣ ಮನೆಯಲ್ಲಿದ್ದು, ೧೯೦೭ರಲ್ಲಿ ಮೈಲಾಪುರದ ನೂತನ ಮಠದ ಕಟ್ಟಡಕ್ಕೆ ಸ್ಥಳಾಂತರಿಸಿದರು. ಮಠದಲ್ಲಿ ೧೯೧೧ರ ಸೆಪ್ಟೆಂಬರ್ ವರೆಗೆ ಇದ್ದರು.

ರಾಮಕೃಷ್ಣಾನಂದರು ಮದರಾಸಿಗೆ ಬಂದಮೇಲೆ ಮೊದಲು ಮಾಡಿದ ಕೆಲಸವೆಂದರೆ, ತಾವು ಇಳಿದುಕೊಂಡಿದ್ದ ಮನೆಯಲ್ಲಿ ತಾವು ಜೊತೆಯಲ್ಲಿ ತಂದಿದ್ದ ತಮ್ಮ ಗುರುಗಳಾದ ಶ್ರೀರಾಮಕೃಷ್ಣರ ಭಾವಚಿತ್ರವನ್ನು ಸ್ಥಾಪಿಸಿ, ತಾವು ಬಾರಾನಗರದ ಮಠದಲ್ಲಿ ಮಾಡುತ್ತಿದ್ದ ಶಾಸ್ತ್ರೋಕ್ತ ಕರ್ಮಗಳನ್ನು ಪ್ರಾರಂಭಿಸಿದ್ದು.

ಅವರು ಮದರಾಸಿನಲ್ಲಿ ಇದ್ದ ೧೪ ವರ್ಷಗಳಲ್ಲಿ ಹತ್ತು ವರ್ಷಗಳು 'ಐಸ್‌ಹೌಸ್'ನಲ್ಲಿಯೇ ಕಳೆದುಹೋಯಿತು. ಅಲ್ಲಿ ವಾಸಿಸಲು ಸ್ಥಳ ಬಿಟ್ಟರೆ, ಅತ್ಯಂತ ಸರಳ ಜೀವನವನ್ನು ನಡೆಸಲು ಬೇಕಾಗುವ ಯಾವುದೇ ಪೀಠೋಪಕರಣಗಳಾಗಲಿ, ಇನ್ನಿತರ ಸಾಮಾನ್ಯ ಉಪಯೋಗಿ ವಸ್ತುಗಳಾಗಲಿ ಇರಲಿಲ್ಲ. ಅವರು ಮಿತಾಹಾರಿಗಳಾಗಿದ್ದರು. ತಮಗೆ ದೊರೆತ ಆಹಾರವನ್ನು ಶ್ರೀರಾಮಕೃಷ್ಣರಿಗೆ ನಿವೇದಿಸಿಯೇ ಸೇವಿಸುತ್ತಿದ್ದರು. ಇನ್ನೊಬ್ಬ ವ್ಯಕ್ತಿ ಸಹಾಯಕ್ಕೆ ಇರಲಿಲ್ಲವಾದ್ದರಿಂದ ಅವರು ಎಲ್ಲ ಕೆಲಸವನ್ನೂ ತಾವೇ ಸ್ವತಃ ಮಾಡಬೇಕಾಗಿದ್ದಿತು. ಆದರೆ ಅವರು ಎಲ್ಲವನ್ನೂ ಪರಮ ಮನಃಸ್ಥೈರ್ಯದಿಂದ ಸಹಿಸಿಕೊಂಡರು.

ತಮ್ಮ ಗುರುದೇವನ ಸಂದೇಶವನ್ನು ಪ್ರಸಾರ ಮಾಡುವುದೇ ಅವರ ಜೀವನದ ಗುರಿಯಾಗಿದ್ದುದರಿಂದ, ಅವರು ಉತ್ಸಾಹಭರಿತರಾಗಿಯೇ ಅನೇಕ ಸಾರ್ವಜನಿಕ ಸಭೆಗಳಲ್ಲಿ ಉಪನ್ಯಾಸಗಳನ್ನು ಮಾಡಲು ಮತ್ತು ಆಧ್ಯಾತ್ಮಿಕ ಶಿಕ್ಷಣ ತರಗತಿಗಳನ್ನು ನಡೆಸಲು ಒಪ್ಪಿಕೊಂಡರು. ಅನೇಕ ವೇಳೆ ಅವರಿಗೆ ವಾರದಲ್ಲಿ ಹನ್ನೆರಡು ಕಾರ್ಯಕ್ರಮಗಳು ಇರುತ್ತಿದ್ದವು!

ನಿಗದಿತ ಕಾರ್ಯಕ್ರಮದ ಸ್ಥಳಕ್ಕೆ ಬಹುಪಾಲು ಅವರು ನಡೆದುಕೊಂಡೇ ಹೋಗಬೇಕಿತ್ತು. ಹವಾಮಾನದ ವೈಪರೀತ್ಯದಲ್ಲೂ ಬಹುದೂರದವರೆಗೆ ನಡೆಯಬೇಕಿತ್ತು. ಏಕೆಂದರೆ ಯಾವುದೇ ವಾಹನದಲ್ಲಿ ಹೋಗಲು ಅವರ ಹತ್ತಿರ ಹಣವಿರಲಿಲ್ಲ. ಸುಮಾರು ದಿನಗಳಲ್ಲಿ ಅವರು ಎಷ್ಟು ಆಯಾಸಗೊಂಡಿರುತ್ತಿದ್ದರೆಂದರೆ, ಅವರು ತಮ್ಮ ಹಸಿವನ್ನು ಒಂದು ತುಂಡು ಬ್ರೆಡ್ ತಿಂದು ನೀಗಿಸಿಕೊಳ್ಳುತ್ತಿದ್ದರು.

ಕೆಲವು ವೇಳೆ ಸಭೆಯಲ್ಲಿ ಕೆಲವೇ ಮಂದಿ ಶ್ರೋತೃಗಳಿರುತ್ತಿದ್ದರು ಅಥವಾ ಸ್ಥಳ ಖಾಲಿಯಾಗಿರುತಿತ್ತು. ಇದರಿಂದ ಅವರು ಕ್ಷೋಭೆಗೊಳ್ಳದೆ, ತಮ್ಮ ಪ್ರವಚನವನ್ನು ಗುರುದೇವನ ಪಾದದಡಿ ಅರ್ಪಿಸಲು ಹಿಂಜರಿಯುತ್ತಿರಲಿಲ್ಲ.

ಶಾಸ್ತ್ರಗಳ ಬೌದ್ಧಿಕ ವ್ಯಾಸಂಗವು ಸಂನ್ಯಾಸಿ ಜೀವನದ ಒಂದು ಪ್ರಮುಖ ಅಂಗ; ಏಕೆಂದರೆ ಅದು ಸಾಧನೆಯಲ್ಲಿ ಏಳಿಗೆಯಾಗಲು ಮತ್ತು ಬೋಧನೆ ಮಾಡಲು ಸಹಕಾರಿಯಾಗುತ್ತದೆ. ಸ್ವಾಮಿ ರಾಮಕೃಷ್ಣಾನಂದರು ಮಹಾ ಮೇಧಾವಿಗಳಾಗಿದ್ದರು. ಅವರು ಸಂಸ್ಕೃತದಲ್ಲಿ, ಹಿಂದೂ ಶಾಸ್ತ್ರಗ್ರಂಥಗಳಲ್ಲಿ ವಿದ್ವಾಂಸರಾಗಿದ್ದರು. ಇತರ ಧರ್ಮಗಳ ದರ್ಶನಗಳ ಅರಿವು, ಗಣಿತಶಾಸ್ತ್ರವೇ ಮುಂತಾದ ವಿಜ್ಞಾನ ಕ್ಷೇತ್ರಗಳಲ್ಲಿ ಪಾಂಡಿತ್ಯ ಅವರಿಗೆ ಇದ್ದಿತು. ಅವರು ಶ್ರೇಷ್ಠ ವಾಗ್ಮಿಗಳಲ್ಲದಿದ್ದರೂ, ಅವರ ತರಗತಿಗಳ ಉಪನ್ಯಾಸಗಳು, ಸರಳ ಸಂಭಾಷಣೆಯ ರೂಪದಲ್ಲಿದ್ದು ಶ್ರೋತೃಗಳ ಮನಸ್ಸಿಗೆ ನೇರವಾಗಿ ನಾಟುವಂತಿದ್ದವು.

ಇಷ್ಟೆಲ್ಲಾ ಪಾಂಡಿತ್ಯವಿದ್ದರೂ, ಅವರು ಸರಳರೂ, ನಿರಹಂಕಾರಿಗಳೂ, ಹೆಸರು ಮತ್ತು ಕೀರ್ತಿಗಳಲ್ಲಿ ನಿರಾಸಕ್ತರೂ ಆಗಿದ್ದರು. ಆದರೆ ಶ್ರೀಶಂಕರರೇ ಮೊದಲಾದ ಪ್ರಸಿದ್ಧ ವ್ಯಕ್ತಿ ಗಳನ್ನು ಕುರಿತು ಯಾರಾದರೂ ಲಘುವಾಗಿ ಮಾತನಾಡಿದರೆ, ಸಲ್ಲದ ವಿಮರ್ಶೆಗಳನ್ನು ಮಾಡಿದರೆ, ಉಗ್ರವಾಗಿ ತಮ್ಮನ್ನು ಸಮರ್ಥಿಸಿಕೊಳ್ಳುತ್ತಿದ್ದರು. ಒಮ್ಮೆ ತಾವು ಮಾತನಾಡಬೇಕಿದ್ದ ಸಭೆಯಲ್ಲಿ ಪ್ರಾಯೋಜಕರು ಶ್ರೀಶಂಕರರ ಬಗ್ಗೆ ಅಗೌರವವಾಗಿ ಮಾತನಾಡಿದುದರಿಂದ ಒಮ್ಮಿಂದೊಮ್ಮೆಗೇ ಸಭೆಯಿಂದ ಹೊರ ನಡೆದರು.

ಶ್ರೀರಾಮಕೃಷ್ಣರ ನೈಜ ಸಂನ್ಯಾಸಿಶಿಷ್ಯರಾಗಿ ಅವರು ಆಧ್ಯಾತ್ಮಿಕ ಉನ್ನತಿಗಾಗಿ, ಕಾಮ ಮತ್ತು ಲೋಭಗಳ ತ್ಯಾಗದ ಅನಿವಾರ್ಯತೆಯನ್ನು ಮೇಲಿಂದ ಮೇಲೆ ಉಲ್ಲೇಖ ಮಾಡುತ್ತಿದ್ದರು. ಈ ರೀತಿಯ ಬೋಧನೆಯು ಕೆಲವು ಗಣ್ಯವ್ಯಕ್ತಿಗಳನ್ನು ಅಸಮಾಧಾನಗೊಳಿಸಿ, ಅವರು ಈ ಬೋಧನೆಯು ಮುಂದುವರಿದರೆ ಆರ್ಥಿಕ ಸಹಾಯವನ್ನು ನಿಲ್ಲಿಸುತ್ತೇವೆಂದು ಸೂಚನೆ ಕೊಟ್ಟರು. ಶ್ರೀರಾಮಕೃಷ್ಣರು ಬೋಧಿಸಿದ್ದ ಸಂನ್ಯಾಸ ಮತ್ತು ಆಧ್ಯಾತ್ಮಿಕ ಜೀವನದ ಮೂಲಸೂತ್ರಗಳಿಗೆ ರಾಮಕೃಷ್ಣಾನಂದರು ಬದ್ಧರಾಗಿದ್ದುದರಿಂದ ಅವನ್ನು ಮಾರ್ಪಡಿಸುವ ಬಗ್ಗೆ ಕಿಂಚಿತ್ತೂ ರಾಜಿಯಾಗದೆ ತಮ್ಮ ನಿಲುವಿನಿಂದ ಕೊಂಚವೂ ಜಗ್ಗಲಿಲ್ಲ.

'ಐಸ್‌ಹೌಸ್' ಕಟ್ಟಡವು ಹರಾಜಿಗೆ ಬಂದಾಗ, ಅವರ ಹಿತೈಷಿಗಳು ಮತ್ತು ಭಕ್ತರುಗಳು ಅದನ್ನು ಖರೀದಿಸಲು ಹರಸಾಹಸಪಡುತ್ತಿದ್ದಾಗ, ಅವರು ಸಂಪೂರ್ಣವಾಗಿ ಅನಾಸಕ್ತರಾಗಿದ್ದರು; ಏಕೆಂದರೆ ಅವರು ವಸತಿಗಾಗಿ, ತಮ್ಮ ಸ್ವಂತ ಮನೆಗಾಗಿ, ಸುಖಜೀವನಕ್ಕಾಗಿ ಎಂದೂ ಆಸಕ್ತರಾಗಿರಲಿಲ್ಲ.